(ಸಾಕ್ಷಿಗೆ ದಿನಾಂಕ: 01.04.2025 ರಂದು ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಶ್ರೀಮತಿ ಪಿ.ಯು., ಪ್ರತಿವಾದಿಗಳ ಪರ ವಕೀಲರಿಂದಃ**

ನನಗೆ ವಿವಾಹ ಆಗಿರುತ್ತದೆ. ನನ್ನ ಗಂಡನ ಹೆಸರು ಬಿ.ಹೆಚ್. ರಾಮಚಂದ್ರ ಆಗಿರುತ್ತದೆ. ನನಗೆ ಇಬ್ಬರು ಮಕ್ಕಳು ಇರುತ್ತಾರೆ. ನನಗೆ ಪ್ರತಿವಾದಿಯರ ಪರಿಚಯ ಇರುತ್ತದೆ. 1ನೇ ಪ್ರತಿವಾದಿ ನನಗೆ ಹೇಗೆ ಪರಿಚಯ ಎಂದರೆ ಸದರಿಯವರು ನನ್ನ ಗಂಡನ ಊರಿನವರಾಗಿರುತ್ತಾರೆ ಎಂದು ನುಡಿಯುತ್ತೇನೆ. ಪ್ರತಿವಾದಿಯರಿಗೆ ನೀಡಿರುತ್ತೇನೆ ಎಂದು ನಾನು ಹೇಳುವ ರೂ.6 ಲಕ್ಷ ಹಣ ನನಗೆ ಹೇಗೆ ಬಂದಿರುತ್ತದೆ ಎಂದರೆ ಸದರಿ ಹಣವನ್ನು ನನ್ನ ಗಂಡ ನನಗೆ ನೀಡಿರುತ್ತಾರೆ ಹಾಗೂ ನನ್ನ ಉಳಿತಾಯದ ಹಣವೂ ಅದರಲ್ಲಿ ಸೇರಿರುತ್ತದೆ ಎಂದು ನುಡಿಯುತ್ತೇನೆ. ಪ್ರತಿವಾದಿಯರೇ ದಾವಾ ಸ್ವತ್ತಿನ ಮಾಲೀಕರಾಗಿರುತ್ತಾರೆ ಎಂದರೆ ಸರಿ.

ದಾವಾ ಸ್ವತ್ತಿನ ಸರ್ವೆ ನಂಬರ್ 3/5 ಆಗಿರುತ್ತದೆ. ಸದರಿ ಸರ್ವೆ ನಂಬರ್ ನ ಒಟ್ಟು ವಿಸ್ತೀರ್ಣ 2 ಎಕರೆ 36 ಗುಂಟೆ ಇರುತ್ತದೆ. ಪ್ರತಿವಾದಿಯರಿಗೆ ಎಷ್ಟು ಹಣ ಸಾಲವನ್ನಾಗಿ ನೀಡಿರುತ್ತೇನೆ ಎಂದರೆ ನಾನು ಸಾಲವಾಗಿ ನೀಡಿರುವುದಿಲ್ಲ, ಜಮೀನಿನ ಖರೀದಿಗಾಗಿ ನೀಡಿರುತ್ತೇನೆ ಎಂದು ನುಡಿಯುತ್ತೇನೆ. ಕ್ರಯದ ಮಾತುಕತೆ ನಮ್ಮ ಗ್ರಾಮವಾದ ಭಕ್ತರಹಳ್ಳಿಯಲ್ಲಿ ಆಗಿರುತ್ತದೆ. ಕ್ರಯದ ಮೊಬಲಗು ಎಷ್ಟಕ್ಕೆ ನಿರ್ಣಯವಾಗಿರುತ್ತದೆ ಎಂದರೆ ಗುಂಟೆಗೆ ರೂ.16,500/-ರಂತೆ ನಿರ್ಣಯವಾಗಿರುತ್ತದೆ ಎಂದು ನುಡಿಯುತ್ತೇನೆ. ದಾವಾ ಸ್ವತ್ತಿನ ಈಗಿನ ಮಾರುಕಟ್ಟೆ ಬೆಲೆ ಏನಿದೆ ಎಂದರೆ ನನಗೆ ಗೊತ್ತಿರುವುದಿಲ್ಲ, ನಾನು ಒಂದು

ಎಕರೆ ಸ್ವತ್ತಿಗೆ ಕರಾರು ಮಾಡಿಕೊಂಡಿರುತ್ತೇನೆ.

ಕ್ರಯದ ಕರಾರನ್ನು ದಿನಾಂಕಃ 23.11.2020ರಂದು ಮಾಡಿಕೊಳ್ಳಲಾಗಿರುತ್ತದೆ. ಸದರಿ ಕರಾರಿನ ಸಮಯದಲ್ಲಿ ಎಲ್ಲಾ ಪ್ರತಿವಾದಿಯರು ಸ್ಥಳದಲ್ಲಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಕ್ರಯದ ಸಂಬಂಧ ನನ್ನ ಮತ್ತು ಪ್ರತಿವಾದಿಯರ ನಡುವೆ ಯಾವುದೇ ಮಾತುಕತೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ಊರಿನಲ್ಲಿ ಜನರಿಗೆ ಬಡ್ಡಿಗೆ ಸಾಲ ನೀಡುತ್ತೇನೆ ಎಂದರೆ ಸರಿಯಲ್ಲ. ಆ ರೀತಿ ಸಾಲ ನೀಡುವಾಗ ನಾನು ಸಾಲದ ಭದ್ರತೆಗಾಗಿ ಚೆಕ್ ಅಥವಾ ಖಾಲಿ ಛಾಪಾ ಕಾಗದಗಳನ್ನು ಸಾಲವನ್ನು ಪಡೆದುಕೊಳ್ಳುವವರಿಂದ ತೆಗೆದುಕೊಳ್ಳುತ್ತೇನೆ ಎಂದರೆ ಸರಿಯಲ್ಲ.

ಪ್ರತಿವಾದಿಯರಿಗೆ ನಾನು ಹಣ ನೀಡುವಾಗ ಯಾರೆಲ್ಲಾ ಸಾಕ್ಷಿದಾರರು ಸ್ಥಳದಲ್ಲಿದ್ದರು ಎಂದರೆ ದೇವವರ್ಧನ, ರವಿಕುಮಾರ್ ಮತ್ತು ಗೋಪಾಲ್ ರವರು ಇದ್ದರು ಎಂದು ನುಡಿಯುತ್ತೇನೆ. ನಾನು ಪ್ರತಿವಾದಿಯರಿಗೆ ಸಾಲವಾಗಿ ನೀಡಿದ ಹಣಕ್ಕೆ ಒತ್ತಾಯಪೂರ್ವಕವಾಗಿ ಸದರಿಯವರಿಂದ ನಿ.ಪಿ.1 ದಾಖಲೆಗೆ ಸದರಿಯವರ ಸಹಿಗಳನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಕರಾರು ಪತ್ರಕ್ಕೆ ಸಹಿ ಹಾಕಿದ ಸಾಕ್ಷಿದಾರರು ನನ್ನ ಸಂಬಂಧಿಕರು ಆಗಿರುತ್ತಾರೆ ಎಂದರೆ ಸರಿಯಲ್ಲ. ದೇವವರ್ಧನ್ ನನಗೆ ಹೇಗೆ ಪರಿಚಯ ಎಂದರೆ ಸದರಿಯವರು ನಮ್ಮ ಗ್ರಾಮದವರಾಗಿರುತ್ತಾರೆ ಎಂದು ನುಡಿಯುತ್ತೇನೆ.

2020 ರಿಂದ 2022ನೇ ಇಸವಿಯ ಅವಧಿ ಕರೋನಾ ಮಹಾಮಾರಿ ಖಾಯಿಲೆ ಇದ್ದಂತಹ ಸಮಯ ಆಗಿತ್ತು ಎಂದರೆ ಸರಿ. ಆ ಸಮಯದಲ್ಲಿ ನಾನು ನಮ್ಮ ಗ್ರಾಮದ ಅನೇಕರಾಗಿ ಧನ ಸಹಾಯ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಕರಾರಿನ ನಿರ್ಧಿಷ್ಟ ಪರಿಪಾಲನೆಗೆ ಪ್ರಸ್ತುತ ದಾವೆಯನ್ನು ಹೊರತುಪಡಿಸಿ ಇನ್ನೆಷ್ಟು ದಾವೆಗಳನ್ನು ನಾನು ದಾಖಲಿಸಿರುತ್ತೇನೆ ಎಂದರೆ ಮತ್ತೊಂದು ದಾವೆ ಇದೇ ನ್ಯಾಯಾಲಯದಲ್ಲಿ ದಾಖಲಾಗಿರುತ್ತದೆ ಎಂದು ನುಡಿಯುತ್ತೇನೆ. ನಮ್ಮ ಊರಿನಲ್ಲಿ ನಾನು ಲೇವಾದೇವಿ ವ್ಯವಹಾರ ಮಾಡುತ್ತಿದ್ದು ಬಡ್ಡಿ ಹಣ ನೀಡುವಲ್ಲಿ ತಡವಾದಾಗ ನಾನು ಒತ್ತಾಯಪೂರ್ವಕವಾಗಿ ಖಾಲಿ ಛಾಪಾ ಕಾಗದಗಳಿಗೆ ಸಾಲಗಾರರ ಸಹಿಗಳನ್ನು ಪಡೆದುಕೊಳ್ಳುತ್ತೇನೆ ಎಂದರೆ ಸರಿಯಲ್ಲ.

***ಮುಂದುವರೆದ ಪಾಟೀ ಸವಾಲಿಗಾಗಿ ವಕೀಲರು ಸಮಯಾವಕಾಶ ಕೋರಿದ್ದು, ನೀಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಕುಣಿಗಲ್.